ಶ್ರೀ ಪೆರಿಕಲ್ ಎಂ. ಮಲ್ಲಪ್ಪ:– ಮಾನ್ಯ ಅಧ್ಯಕ್ಷರೇ, ಅದರ ಬಗ್ಗೆ ಸರ್ಕಾರ ಚಿಂತನೆ ಮಾಡುತ್ತಿದೆ. ಆದಷ್ಟು ಜಾಗ್ರತೆಯಾಗಿ ನಿರ್ಣಯವನ್ನು ತೆಗೆದುಕೊಂಡು ಗುತ್ತಿಗೆ ಆಧಾರದ ಮೇಲೆ ಕೆಲವು ನಷ್ಟವಾಗುತ್ತಿರುವ ಹೋಟೆಲ್‌ಗಳನ್ನು ಲೀಸ್‌ಗೆ ಕೊಡಬೇಕೆಂಬ ವಿಷಯ ಸರ್ಕಾರದ ಮುಂದೆ ಪರಿಶೀಲನೆಯಲ್ಲಿದೆ.

ಶ್ರೀ ಎಂ.ಪಿ. ವೆಂಕಟಪ್ಪ:– ಮಾನ್ಯ ಅಧ್ಯಕ್ಷರೇ, ಮುಳಬಾಗಿಲಿನಲ್ಲಿ ಹೋಟೆಲ್ ಒಂದನ್ನು ಕಟ್ಟಿ 2–3 ವರ್ಷಗಳಾಯಿತು. ಸುಮಾರು 3–4 ಪ್ರಶ್ನೆಗಳನ್ನು ಇದರ ಬಗ್ಗೆ ಕೇಳಿದ್ದೇನೆ. ಈ ಸದನದಲ್ಲಿ ಮುಂದಿನ ಅಧಿವೇಶನ ಪ್ರಾರಂಭವಾಗುವಷ್ಟರಲ್ಲಿಯೇ ಪ್ರಾರಂಭ ಮಾಡುತ್ತೇವೆಂದು ಹೇಳಿದ್ದರು. ಏನು ಇದರ ಸಮಾಚಾರ ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ:– ಮಾನ್ಯ ಅಧ್ಯಕ್ಷರೇ, ಮುಳಬಾಗಿಲು ಹೋಟೆಲ್‌ಗೆ ಪೀಠೋಪಕರಣ ಮತ್ತು ಪೆಯಿಂಟಿಂಗ್, ವೈಟ್‌ವಾಷ್ ಇತ್ಯಾದಿ ಎಲ್ಲಾ ಕೆಲಸಕಾರ್ಯಗಳು ನಡೆಯುತ್ತಿವೆ. ಮುಂದಿನ ತಿಂಗಳು 2 ನೇ ಅಥವಾ 3 ನೆಯ ವಾರದಲ್ಲಿ ಮುಳಬಾಗಿಲು ಹೋಟೆಲ್ ಪ್ರಾರಂಭವಾಗುತ್ತದೆ.

ಮುಲ್ಕಿಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಫೇರ್‌ಸ್ಟೇಜ್

387 (701): ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದ್ರೆ):–

ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರು ಮುಲ್ಕಿಗೆ ಫೇರ್‌ಸ್ಟೇಜ್‌ನ್ನು ಗೊತ್ತು ಪಡಿಸದಿರುವುದಕ್ಕೆ ಕಾರಣವೇನು;

ಆ. ಫೇರ್ ಸ್ಟೇಜ್ ಗೊತ್ತು ಪಡಿಸದಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಇ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರಿಗೆ ಪುರಸಭೆಯವರು ಧರ್ಮಾರ್ಥವಾಗಿ ಜಾಗ ಕೊಡುವುದಾಗಿ ಹೇಳಿದರೂ ಕಾರ್ಯಪ್ರವೃತ್ತರಾಗದಿರಲು ಕಾರಣವೇನು;

ಈ. ಇದರ ಬಗ್ಗೆ ಸರ್ಕಾರ ಎಷ್ಟು ಸಮಯದಲ್ಲಿ ಕ್ರಮ ತೆಗೆದುಕೊಳ್ಳುವುದು ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):–

ಅ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಮೂಲ್ಕಿಗೆ ಫೇರ್‌ಸ್ಟೇಜನ್ನು ಗೋತ್ತುಪಡಿಸಿದೆ.

ಆ. ಉದ್ಭವಿಸುವುದಿಲ್ಲ.

ಇ. ಬಸ್ ನಿಲ್ದಾಣವನ್ನು ನಿರ್ಮಿಸುವ ಪ್ರಸ್ತಾವನೆಯು ಇಲ್ಲದಿರುವುದರಿಂದ ಜಮೀನಿನ ಅಗತ್ಯವಿರುವುದಿಲ್ಲ.

ಈ. ಉದ್ಭವಿಸುವುದಿಲ್ಲ.

ಶ್ರೀ ಕೆ. ಸೋಮಪ್ಪ ಸುವರ್ಣ:– ಮಾನ್ಯ ಅಧ್ಯಕ್ಷರೇ, ತಾವು ತಮ್ಮ ಉತ್ತರದಲ್ಲಿ ಮುಲ್ಕಿಯಲ್ಲಿ ಫೇರ್‌ಸ್ಟೇಜ್‌ಅನ್ನು ಗೊತ್ತುಪಡಿಸಲಾಗಿದೆ ಎಂದು ಹೇಳಿದ್ದೀರಿ, ಆದರೆ ಹೋಗುವಂತ ಬಸ್‌ಗಳು ಅಲ್ಲಿ ನಿಲ್ಲುವುದಿಲ್ಲ. ನಾವು ತಡೆದರೂ ಸಹ ಆ ಬಸ್‌ಗಳು ನೇರವಾಗಿ ತೆಗೆದುಕೊಂಡು ಹೋಗುತ್ತಾರೆ.

ಫೇರ್‌ಸ್ಟೇಜ್ ಮಾಡಿದರೂ ಸಹ ಬೆಂಗಳೂರಿನಿಂದ ಮುಲ್ಕಿಗೆ ಟಿಕೆಟ್ ಕೇಳಿದರೆ ಮುಲ್ಕಿಗೆ ಟಿಕೆಟ್ ಕೊಡುವುದಿಲ್ಲ. ಪತಕ್ಕೆಂದರೆ ಉಡುಪಿಗೆ ಹೋಗುವಂಥ ಬಸ್‌ಗಳು. ಅವುಗಳಲ್ಲಿ ಟಿಕೆಟ್ ಕೊಡುವುದಿಲ್ಲ. ಈ ರೀತಿ ಆಗುತ್ತಿರುವುದರಿಂದ ಮುಲ್ಕಿಯಿಂದಲೇ ಟಿಕೆಟ್ ಕೊಡುವಂಥ ಒಂದು ಸವಲತ್ತು ಸಿಕ್ಕಿದರೆ ಬೆಳೆಯುತ್ತಿರುವಂಥ ಮುಲ್ಕಿ ಪಟ್ಟಣಕ್ಕೆ ಅನುಕೂಲವಾಗುತ್ತದೆ. ಈಗಾಗಲೇ ಕೊಂಕಣ ರೈಲ್ವೆ ನಿಲ್ದಾಣವನ್ನೂ ಸಹ ಮಾಡಿದ್ದಾರೆ. ನಮ್ಮ ರಾಜ್ಯದ ನೂರಾರು ಬಸ್‌ಗಳು ಆ ಹೆದ್ದಾರಿಯಲ್ಲಿ ಹೋಗುತ್ತಿವೆ. ಮುಲ್ಕಿ ಎಂಬುದು ನಮ್ಮ ಮೂಡಬಿದರೆಗೂ 30 ಕಿಲೋಮೀಟರ್, ಮಂಗಳೂರಿಗೂ ಮೂವತ್ತು ಕಿಲೋಮಿಟರ್ ಉಡುಪಿಗೂ 30 ಕಿಲೋಮೀಟರ್ ಮಧ್ಯೆ ಎಲ್ಲಾ ಎಕ್ಸಪ್ರೆಸ್ ಬಸ್‌ಗಳು ನಿಲ್ಲುತ್ತಿವೆ. ಆದರೆ ನಮ್ಮ ಸರ್ಕಾರಿ ಬಸ್ಸ್‌ಗಳಿಗೆ ಅಲ್ಲಿ ಟಿಕೆಟ್ ಕೊಡುವಂಥ ಸೌಲಭ್ಯ ಇಲ್ಲದ ಕಾರಣಕ್ಕಾಗಿ ಯಾವ ಬಸ್‌ಗಳೂ ಅಲ್ಲಿ ನಿಲ್ಲುವುದಿಲ್ಲ. ಆದ್ದರಿಂದ ಫೇರ್‌ಸ್ಟೇಜ್ ಮಾಡಿದ್ದೇವೆಂದು ಹೇಳಿದರೂ ಅಲ್ಲಿ ಬಸ್ ನಿಲ್ಲುವಂತೆ ತಾವು ಕಡ್ಡಾಯವಾಗಿ ನಿರ್ದೇಶನ ಕೊಡಬೇಕು. ಮುಖ್ಯವಾಗಿ ಪತ್ರಿಕೆಯಲ್ಲಿ ಪ್ರಕಟಪಡಿಸಿದರೆ ಮಾತ್ರ ಅದು ಅನುಷ್ಠಾನಕ್ಕೆ ಬರುತ್ತದೆ. ಇಲ್ಲದಿದ್ದರೆ ಯಾರಿಗೂ ಗೊತ್ತಾಗುವುದಿಲ್ಲ. ಆದ್ದರಿಂದ ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ:– ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೇಳುವುದು ಅಲ್ಲಿಗೆ ಬಸ್‌ಸ್ಟಾಂಡ್ ಬೇಕು ಎನ್ನುವುದು ಒಂದೇ ಒಂದು ಉದ್ದೇಶ. ಇದರ ಮೇಲೆ ಎರಡು ಸಾರಿ ಕ್ವೊಶ್ಚನ್ ಬಂದಿತ್ತು. ಎರಡು ಸಾರಿ ಉತ್ತರ ಕೊಟ್ಟಿದ್ದೇನೆ. ಅಲ್ಲಿ ಏನೆಂದರೆ ಇದು ಫೀಸಬಲ್ ಆಗುವುದಿಲ್ಲ. 20–25 ಕಿಲೋಮೀಟರ್ ಒಳಗೆ ಬೇರೆ ಸ್ಥಳದಲ್ಲಿ ಇದೆ. ಅಲ್ಲಿ ಎಕ್ಸ್‌ಪ್ರೆಸ್ ನಿಲ್ಲುತ್ತಿದೆ. ಅಲ್ಲದೆ ಲಕ್ಷುರಿ, ಸೆಮಿಲಕ್ಷುರಿ ಅವುಗಳಿಗೆ ಫೇರ್‌ಸ್ಟೇಜ್ ಫಿಕ್ಸ್ ಆಗಿದೆ. ಆ ಸ್ಟೇಜ್‌ನಲ್ಲಿ ಈಗ ಎಕ್ಸ್‌ಪ್ರೆಸ್ ಇದೆ. ಎರಡು ರೂಪಾಯಿ ಮಿನಿಮಮ್ ಎಂದಿದೆ. ಹಾಗೆಯೇ ಮಂಗಳೂರು ಮುಲ್ಕಿ 5 ರೂಪಾಯಿಗಳು ಸೆಮಿಲಕ್ಷುರಿಗೆ; 8 ರೂಪಾಯಿಗಳು ಲಕ್ಷುರಿಗೆ, ಈ ಪ್ರಕಾರವಾಗಿ ಕೊಡುತ್ತಿದ್ದೇವೆ ಮತ್ತು ಅಲ್ಲಿ ನಿಲ್ಲಿಸುತ್ತಿದ್ದೇವೆ. ನಿಮಗೆ ಬೇಕಾಗಿರುವುದು ಬಸ್‌ಸ್ಟಾಂಡ್; ಆ ಬಸ್‌ಸ್ಟಾಂಡ್ ಫೀಸಬೆಲೆಟಿ ಇಲ್ಲದ ಕಾರಣ ನಮಗೆ ಬಹಳ ತೊಂದರೆಯಾಗಿದೆ.

ಶ್ರೀ ಕೆ. ಸೋಮಪ್ಪ ಸುವರ್ಣ:– ಅಲ್ಲಿ ಧರ್ಮಾರ್ಥವಾಗಿ ಒಂದು ಕೊಠಡಿಯನ್ನು ಕೊಡುತ್ತೇವೆಂದು ಹೇಳಿದ್ದಾರೆ. ನಿಮಗೆ ಯಾವ ಖರ್ಚೂ ಇಲ್ಲ. ಅಲ್ಲಿ ಟಿಕೆಟ್ ಇಷ್ಯೂ ಮಾಡುವಂಥ ಸವಲತ್ತುಗಳನ್ನು ಒದಗಿಸಿಕೊಡಬೇಕು. ಬಸ್‌ಸ್ಟಾಂಡ್‌ನ ಆಗತ್ಯವಿದ್ದರೂ ಸಹ ಇರುವ ಬಸ್‌ಸ್ಟಾಂಡ್ನಲ್ಲಿಯೇ ಇರುವ ಬಿಲ್ಡಿಂಗ್‌ನಲ್ಲಿ ಧರ್ಮಾರ್ಥವಾಗಿ ಒಂದು ಕೋಣೆಯನ್ನು ಕೆ.ಎಸ್.ಆರ್.ಟಿ.ಸಿ.ಗೆ ಕೊಡುತ್ತೇವೆಂದು ಹೇಳಿದ್ದಾರೆ. ಅಲ್ಲಿ ಟಿಕೆಟ್ ಇಷ್ಯೂ ಮಾಡುವಂಥ ಒಂದು ಸವಲತ್ತನ್ನು ಕೊಟ್ಟರೆ ಮಾತ್ರ. ನೀವು ಫೇರ್‌ಸ್ಟೇಜ್ ಮಾಡಿದ್ದಕ್ಕೂ ಬಸ್ ನಿಲುಗಡೆ ಮಾಡಿದ್ದಕ್ಕೂ ಅನುಕೂಲವಾಗುತ್ತದೆ. ಅದನ್ನು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ:– ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಕೊಟ್ಟಿರುವ ಸಲಹೆ ಏನಿದೆ ಅದನ್ನು ಪರಿಶೀಲನೆ ಮಾಡಿ ಆ ಪ್ರಕಾರ ವಿಚಾರ ಮಾಡುತ್ತೇನೆ.

ಕನ್ನಡ ಚಲನಚಿತ್ರಗಳಿಗೆ ಸಹಾಯಧನ

384 (1080): ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):–

ಮಾನ್ಯ. ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?